**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ</u>**

<u>ಸಿ. ಸಿ. ನಂ. **804/2017**</u>

ಪಿರ್ಯಾದುದಾರರು:- ನಂದಗುಡಿ ಪೊಲೀಸ್ ಠಾಣೆ, ಹೊಸಕೋಟೆ

ವಿರುದ್ದ

ಆರೋಪಿಗಳು:-
1. ನವೀನ ಬಿನ್ ಲೇಟ್ ವೆಂಕಟರಮಣಪ್ಪ, 28 ವರ್ಷ
   ವಾಸ: ಬನಮಾಕನಹಳ್ಳಿ, ನಂದಗುಡಿ ಹೋಬಳಿ
2. ನರಸಿಂಹಯ್ಯ ಬಿನ್ ಕೃಷ್ಣಪ್ಪ, 27 ವರ್ಷ
3. ಮುನಿರಾಜು ಬಿನ್ ಕದಿರಪ್ಪ, 27 ವರ್ಷ
   ಆರೋಪಿ-2 ಮತ್ತು 3ರವರ ವಾಸ: ತಾವರೆಕೆರೆ ಗ್ರಾಮ, ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು.

**<u>ದೋಷಾರೋಪಣೆ</u>**

ಶ್ರೀ ಗಿರೀಶ ಆರ್.ಬಿ., ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಗಳಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ: 09.06.2016 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ನಂದಗುಡಿ ಪೊಲೀಸ್ ಠಾಣಾ ಸರಹದ್ದು, ಬೈಲನರಸಾಪುರ-ಬಾಣಮಾಕನಹಳ್ಳಿ ರಸ್ತೆ, ಅಗಸರಹಳ್ಳಿ ಗೇಟ್ ಬಳಿ ರಸ್ತೆಯಲ್ಲಿ ಚಾ.ಸಾ.1 ಮತ್ತು 2ರವರು ಮೋಟಾರ್ ಸೈಕಲ್‌ನಲ್ಲಿ ಬರುತ್ತಿದ್ದಾಗ ಆರೋಪಿಗಳಾದ ನೀವುಗಳು ಚಾ.ಸಾ.1 ಮತ್ತು 2ರವರನ್ನು ಅಡ್ಡಗಟ್ಟಿ ಅಕ್ರಮ ತಡೆ/ನಿಗ್ರಹವನ್ನು ಉಂಟುಮಾಡಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ **ಕಲಂ.341ರ ಸಹವಾಚಕ 34ರ** ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸಮಯ ಮತ್ತು ಸ್ಥಳದಲ್ಲಿ, ನಿಮ್ಮ ಪೈಕಿ 1ನೇ ಆರೋಪಿಯಾದ ನೀವು ನಿಮ್ಮ ಕೈಯಲ್ಲಿದ್ದ ರಾಡ್‌ನಿಂದ ಚಾ.ಸಾ.1ರವರಿಗೆ ಹೊಡೆದು ನೋವುಂಟು ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ **ಕಲಂ.324ರ ಸಹವಾಚಕ 34ರ** ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸಮಯ ಮತ್ತು ಸ್ಥಳದಲ್ಲಿ, ನಿಮ್ಮ ಪೈಕಿ 2ನೇ ಮತ್ತು 3ನೇ ಆರೋಪಿಗಳಾದ ನೀವುಗಳು ಚಾ.ಸಾ.1ರವರಿಗೆ ಜೀವ ಭಯವನ್ನುಂಟು ಮಾಡುವ ಮತ್ತು ಹೆದರಿಸುವ ಉದ್ದೇಶದಿಂದ ಸಾಯಿಸುವುದಾಗಿ ಹೇಳಿ ಪ್ರಾಣಬೆದರಿಕೆ ಹಾಕಿರುತ್ತೀರಿ. ಆ ಮೂಲಕ ನೀವು ಭಾ.ದಂ.ಸಂ. **ಕಲಂ.506ರ ಸಹವಾಚಕ ಕಲಂ.34ರ** ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ದೋಷಾರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**

**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ</u>**

**<u>ಸಿ. ಸಿ. ನಂ. 804/2017</u>**

ಪಿರ್ಯಾದುದಾರರು:- ನಂದಗುಡಿ ಪೊಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿಗಳು:-
1. ನವೀನ ಬಿನ್ ಲೇಟ್ ವೆಂಕಟರಮಣಪ್ಪ, 28 ವರ್ಷ
   ವಾಸ: ಬನಮಾಕನಹಳ್ಳಿ, ನಂದಗುಡಿ ಹೋಬಳಿ
2. ನರಸಿಂಹಯ್ಯ ಬಿನ್ ಕೃಷ್ಣಪ್ಪ, 27 ವರ್ಷ
3. ಮುನಿರಾಜು ಬಿನ್ ಕದಿರಪ್ಪ, 27 ವರ್ಷ
   ಆರೋಪಿ-2 ಮತ್ತು 3ರವರ ವಾಸ: ತಾವರೆಕೆರೆ ಗ್ರಾಮ,
   ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು.

**<u>ದೋಷಾರೋಪಣೆ</u>**

ಪ್ರಶ್ನೆ 1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?

ಉತ್ತರ:

ಪ್ರಶ್ನೆ 2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ:

ಮೇಲ್ಕಂಡ ಆಪಾದನೆಯನ್ನು ಆರೋಪಿಗಳಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿ: 26.08.2021 ರಂದು ಧೃಢೀಕರಿಸಿದ್ದೇನೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**